ಇಂದು ದಿನಾಂಕಃ 22.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ನಾನು ನಿವೃತ್ತ ಪೋಲಿಸ್ ಅಧಿಕಾರಿ ಎಂದರೆ ಸರಿ. ನನಗೆ ಅ- ಖರಾಬು, ಬಿ -ಖರಾಬು ಗಳ ಬಗ್ಗೆ ಅಲ್ಪ ಸ್ವಲ್ಪ ಸಾಮಾನ್ಯ ಜ್ಞಾನ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಸೇವಾಧಿಯಲ್ಲಿ ದಾರಿ ವಿವಾದಕ್ಕೆ ಸಂಬಂದಪಟ್ಟ ಪ್ರಕರಣ ಯಾವುದೇ ಬಂದಿರುವುದಿಲ್ಲ. ನಾನು ಸಿವಿಲ್ ಪೋಲಿಸ್ ಅಧಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತೇನೆ. ವಾದಿಯ ಪರಿಚಯ ನನಗೆ ಇರುತ್ತದೆ. ವಾದಿಗೆ ಸರ್ವೆನಂ. 351/2, 7 ಎಕರೆ 34 ಗುಂಟೆ, ಪಿ ಕೆ 2 ಗುಂಟೆ ಎಂದರೆ ಸರಿ. ನಿವ್ವಳ ಕ್ಷೇತ್ರ 7 ಎಕರೆ 32 ಗುಂಟೆ ಎಂದರೆ ಸರಿ. ಸದರಿ 2 ಗುಂಟೆ ಜಮೀನು ಅ- ಖಾರಾಬು ಎಂದರೆ ನನಗೆ ಗೊತ್ತಿರುವುದಿಲ್ಲ.

2. ನನ್ನ ಸಾಕ್ಷ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. 2 ಗುಂಟೆ ಖರಾಬು ಕ್ಷೇತ್ರ ವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸಾಕ್ಷಿಯು 2 ಗುಂಟೆ ಮಾತ್ರ ಅಲ್ಲ ಇನ್ನು ಹೆಚ್ಚಿಗೆ 11 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ. ವಿವಾದಿತ ದಾರಿ ಹಾಗೂ ನಮ್ಮ ಆಸ್ತಿಯ ನಡುವೆ ಬದು ಇರುತ್ತದೆ ಎಂದರೆ ಸರಿಯಲ್ಲ. ವಿವಾದಿತ ದಾರಿ ಕೇವಲ ವಾದಿಯರಿಗೆ ಮಾತ್ರ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ. ನಾನು ಪಿ ಡಬ್ಲೂ ಡಿ ಇಲಾಖೆಯ ಮೂಲಕ ಸುಮಾರು 30 ಫೂಟ್ ಜಾಗದಲ್ಲಿ ನಾನು ರಸ್ತೆಯನ್ನು ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಕಾಲು ದಾರಿಯನ್ನು 30 ಫೂಟ್ ಅಗಲದಲ್ಲಿ ನಾನು ರಸ್ತೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

3. ನಿಮ್ಮ ಪ್ರಕಾರ ಎಷ್ಟು ಅಡಿ ಜಾಗ ರಸ್ತೆಗೆ ಬಿಡಲಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಯಾವುದೇ ರಸ್ತೆಯನ್ನು ಮಾಡುತ್ತಿಲ್ಲ ಬದಲಾಗಿ ಜಿಲ್ಲಾ ಪಂಚಾಯತಿಯವರು ಸುಮಾರು 15 ಅಡಿ ಅಗಲ ಜಾಗದಲ್ಲಿ ರಸ್ತೆಯನ್ನು ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದು ಅದರಂತೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.